**ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ.  35/2021**

| | | | |
|---|---|---|---|
| **ಹೆಸರು** | **:** | **ಅನಿತಾ** | **ದೋ.ಸಾ. 1** |
| **ತಂದೆಯ ಹೆಸರು** | **:** | **ದಾಸ ಅಲಿಯಾಸ ದೇವಿದಾಸ** | **ಪ್ರಾ.ಸಾ.   3** |
| **ವಯಸ್ಸು** | **:** | **36 ವರ್ಷ** | **ದಿನಾಂಕಃ 11-09-2023** |
| **ಉದ್ಯೋಗ** | **:** | **ಕೂಲಿ** | |
| **ವಾಸಸ್ಥಳ** | **:** | **ಶಿವಾರೆಡ್ಡಿ ಪಲ್ಲಿ** | |

**ಸಾಕ್ಷಿ ತನಗೆ ಕನ್ನಡ ಭಾಷೆ ಮಾತನಾಡಲು ಬರುವುದಿಲ್ಲ ಮತ್ತು ಕೇವಲ ತೆಲುಗು ಭಾಷೆ ಮಾತನಾಡುವುದರಿಂದ ತೆಲುಗು ಮತ್ತು ಕನ್ನಡ ಎರಡೂ ಭಾಷೆಯನ್ನು ಮಾತನಾಡುವ ಮತ್ತು ನ್ಯಾಯಾಲಯದಲ್ಲಿ ಹಾಜರಿರುವ  ಶ್ರೀ ಸಿ.ಎಸ್. ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಕ ಮಾಡಿಕೊಂಡು ಸಾಕ್ಷಿಗೆ ತೆಲುಗಿನಲ್ಲಿ  ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ 1 ನೇ ಆರೋಪಿ ನನ್ನ ಗಂಡ.  2 ಮತ್ತು 3 ನೇ ಆರೋಪಿತರು ನನ್ನ ಅತ್ತೆ-ಮಾವ.  4 ಮತ್ತು 5 ನೇ ಆರೋಪಿತರು ನನ್ನ ಭಾವ ಮತ್ತು ಮೈದುನಾ ಹಾಗೂ 6 ನೇ ಆರೋಪಿ ವಾರಗಿತ್ತಿ.

ಅದೇ ರೀತಿ ಈ ಪ್ರಕರಣದ ಸಾಕ್ಷಿದಾರರಾದ 2 ರಿಂದ 8 ನನಗೆ ಗೊತ್ತು. ಸದರಿಯವರೆಲ್ಲರು ನಮ್ಮ ಊರಿನವರು.

ನನ್ನ ಮದುವೆ 2006 ನೇ ಇಸವಿಯಲ್ಲಿ 1 ನೇ ಆರೋಪಿ ಜೊತೆ ಮನ್ನಾಪೂರಂ ನಲ್ಲಿರುವ ಅವನ ಮನೆಯಲ್ಲಿ ನಡೆದಿತ್ತು.  ಮದುವೆಯಾದ ನಂತರ ನಾನು 1 ರಿಂದ 6 ನೇ ಆರೋಪಿತರ ಜೊತೆಗೆ ಮನ್ನಾಪೂರದಲ್ಲಿರುವ ಅವರ ಮನೆಯಲ್ಲೆ ವಾಸವಿದ್ದೆ.  ಮದುವೆಯಾದ 6 ತಿಂಗಳವರೆಗೆ ಆರೋಪಿತರು ನನ್ನನ್ನು ಚೆನ್ನಾಗಿ ನೋಡಿಕೊಂಡು ನಂತರ ವಿನಾ ಕಾರಣ ನನಗೆ ಹಿಂಸೆ  ಕೊಡಲು ಪ್ರಾರಂಭಿಸಿದರು.  ನನ್ನ ಅತ್ತೆ 3 ನೇ ಆರೋಪಿ ಮಾತು ಕೇಳಿಕೊಂಡು ನನ್ನ ಗಂಡ ಮನೆಗೆ ಕುಡಿದು ಬಂದು ನನಗೆ ಹೊಡೆ ಬಡೆ ಮಾಡುತ್ತಿದ್ದನು.  6 ತಿಂಗಳ ಗರ್ಭಿಣಿಯಾಗಿದ್ದ ನನ್ನನ್ನು ಆರೋಪಿತರು

ಹೊಡೆ-ಬಡೆ ಮಾಡಿ ಮನೆಯಿಂದ ಹೊರಗೆ ಹಾಕಿದರು. ನನಗೆ ಮಗು ಜನಿಸಿದ ನಂತರ ಆರೋಪಿತರು ಮಗುವನ್ನು ಅವರ ಬಳಿಯೇ ಇಟ್ಟುಕೊಂಡರು ಮತ್ತು ನನ್ನನ್ನು ಸ್ವಲ್ಪ ದಿನ ಅವರ ಮನೆಯಲ್ಲಿ ಇಟ್ಟುಕೊಂಡರು. ನಾನು ಮತ್ತೇ 2 ನೇ ಮಗುವಿಗೆ ಗರ್ಭಿಣಿಯಾದಾಗ ಆರೋಪಿತರು ಪುನಹಃ ನನ್ನನ್ನು ಮನೆಯಿಂದ ಹೊರಗೆ ಹಾಕಿದರು. ಅಂದಿನಿಂದ ಇಂದಿನವರೆಗೆ ನಾನು ನನ್ನ ತವರು ಮನೆಯಲ್ಲೆ ವಾಸವಿದ್ದೇನೆ. ನನ್ನ ಇಬ್ಬರು ಮಕ್ಕಳು ಸಹ ನನ್ನ ಬಳಿಯೇ ಇದ್ದಾರೆ.

ಕಳೇದ 5 ವರ್ಷಗಳಿಂದಲೂ ನಾನು ನನ್ನ ತವರು ಮನೆಯಲ್ಲೆ ವಾಸವಿದ್ದು, ಆರೋಪಿತರು ಅಲ್ಲಿಗೂ ಸಹ ಬಂದು ನನಗೆ ಹೊಡೆ ಬಡೆ ಮಾಡಿರುತ್ತಾರೆ. ಈಗ್ಗೆ 3 ವರ್ಷಗಳ ಹಿಂದೆ ಒಂದು ದಿನ ರಾತ್ರಿ ನನ್ನ ತವರು ಮನೆಗೆ ಬಂದಿದ್ದ ಆರೋಪಿತರೆಲ್ಲರು ಸೇರಿ ನನಗೆ ಹೊಡೆ-ಬಡೆ ಮಾಡಿರುತ್ತಾರೆ. ಆದ್ದರಿಂದ ನಾನು ಆರೋಪಿತರ ವಿರುದ್ಧ ಪೊಲೀಸರಿಗೆ ಅದೇ ದಿನ ರಾತ್ರಿ ದೂರು ಕೊಟ್ಟಿರುತ್ತೇನೆ.

ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನಿಗ ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ಈಗ ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸ್ವ-ಇಚ್ಛೆಯಿಂದ ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎನ್ನುತ್ತಾರೆ.

ನಂತರ ಘಟನಾ ಸ್ಥಳಕ್ಕೆ ಬಂದಿದ್ದ ಪೊಲೀಸರಿಗೆ ನಾನೇ ಸ್ಥಳ ತೋರಿಸಿರುತ್ತೇನೆ. ಪೊಲೀಸರು ಆ ಸಂದರ್ಭದಲ್ಲಿ ಎಂದು ಫೋಟೊ ಪಡೆದಿರುತ್ತಾರೆ ಮತ್ತು ಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ. ಅದೇ ದಿನ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಮತ್ತೊಂದು ಸಹಿ ಪಡೆದರು.

ನಾನು ಪೊಲೀಸರ ಮುಂದೆ ಯಾವುದೇ ಮರುಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ದೂರಿಗೆ ಭಾಗಶಃ ಮತ್ತು ಮರುಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಜಹೀರಾಬಾದನಲ್ಲಿ ಆಟೋ ಚಾಲನೆ ಮಾಡಿಕೊಂಡು ವಾಸವಿರುವ ನನ್ನ ತಮ್ಮ ಚಾಸಾ-4 ಮತ್ತು ನನ್ನ ತಂದೆ-ತಾಯಿಯವರಿಗೆ ಆರೋಪಿತರು ಜೀವ ಬೆದರಿಕೆ ಹಾಕಿದರು ಎಂದರೆ ಸರಿ. ಆರೋಪಿತರು ನನ್ನ ಅಕ್ಕ ಚಿನ್ನಾರಿಗೆ ಹೊಡೆದು ಕೈ ಮುರಿದಿರುತ್ತಾರೆ ಎಂದರೆ ಸರಿ.

ದಿನಾಂಕ 28-01-2020 ರಂದು 1 ನೇ ಆರೋಪಿ ನನ್ನ ಬಳಿ ಜಗಳವಾಡಿ ನನ್ನ ತಂದೆ-ತಾಯಿ ಮನೆಗೆ ಬಿಟ್ಟು ಹೋದನು ಎಂದರೆ ಸರಿ. ಅದೇ ದಿನ ರಾತ್ರಿ 09-00 ಗಂಟೆಗೆ ಆರೋಪಿತರೆಲ್ಲರು ಗುಂಪು ಕಟ್ಟಿಕೊಂಡು ಎಲ್ಲರು ನನಗೆ ರಂಡಿ, ಬೊಸುಡಿ ಎಂದು ಬೈದರು ಎಂದರೆ ಸರಿ. ಆರೋಪಿತರು

ನನ್ನ ತಲೆ ಕೂದಲು ಹಿಡಿದು ಎಳೆದಾಡಿ, ನನ್ನ ಬೆನ್ನು, ಭುಜ ಮತ್ತು ಮುಖದ ಮೇಲೆ ಹೊಡೆದರು ಎಂದರೆ ಸರಿ. 4 ಮತ್ತು 5 ನೇ ಆರೋಪಿತರು ನನ್ನ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡರು ಮತ್ತು 6 ನೇ ಆರೋಪಿ ನನ್ನ ಎದೆ ಮತ್ತು ಹೊಟ್ಟೆಯ ಮೇಲೆ ಹೊಡೆದರು ಎಂದರೆ ಸರಿ. ಆರೋಪಿತರು ನನ್ನ ಹಿರಿಯ ಮಗನನ್ನು ನನ್ನಿಂದ ಎಳೆದುಕೊಂಡು ಹೋದರು ಎಂದರೆ ಸರಿ. ಜಗಳವಾದ ಶಬ್ದ ಕೇಳಿ ಚಾಸಾ-4 ಮತ್ತು 5 ರವರು ಬಂದು ಗಲಾಟೆ ಬಿಡಿಸಿದರು ಎಂದರೆ ಸರಿ. 1 ನೇ ಆರೋಪಿ ಪೊಲೀಸರು ನನಗೆ ಏನು ಮಾಡುವುದಿಲ್ಲ ನೀನು ಠಾಣೆಗೆ ಹೋದರೆ ಹೊಡೆದು ಖಲಾಸ ಮಾಡುತ್ತೇನೆ ಎಂದು ಬೆದರಿಕೆ ಹಾಕಿದನು ಎಂದರೆ ಸರಿ.

ಮರುದಿನ ಸಾಯಂಕಾಲ 05-30 ಕ್ಕೆ ಆರೋಪಿತರ ವಿರುದ್ಧ ನಿಪಿ-2 ರಂತೆ ಪೊಲೀಸರಿಗೆ ದೂರು ಕೊಟ್ಟೆ ಎಂದರೆ ಸರಿ. ಮೇಲ್ಕಂಡ ಎಲ್ಲಾ ವಿಚಾರಗಳನ್ನು ನಿಪಿ-2 ರ ದೂರಿನಲ್ಲಿ ಹೇಳಿದ್ದೆ ಎಂದರೆ ಸರಿ.

ಅದೇ ದಿನ ನಾನು ಪೊಲೀಸರ ಮುಂದೆ ನಾನು ನನಗೆ ಯಾವುದೇ ಗಾಯ ಆಗಿಲ್ಲ ಹಾಗಾಗಿ ಆಸ್ಪತ್ರೆಗೆ ಹೋಗಿಲ್ಲ ಎಂದು ಮರುಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ.

ದಿನಾಂಕ 30-01-2020 ಘಟನಾ ಸ್ಥಳಕ್ಕೆ ಬಂದಿದ್ದ ಪೊಲೀಸರು ನಾನೇ ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಬರೆದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದರಿಂದ ಸಾಕ್ಷಿಗೆ ರೂ.200/- ಖರ್ಚು ಕೊಡುವಂತೆ ಆದೇಶಿಸಿ, ಪಾಟೀ ಸವಾಲು ಮುಂದೂಡಲಾಯಿತು.**

**(ಸಾಕ್ಷಿ ತೆಲುಗು ಭಾಷೆಯಲ್ಲಿ ಹೇಳಿದ್ದನ್ನು ಭಾಷಾಂತರಕಾರರು ಹಾಗೂ ವಕೀಲರಾದ ಶ್ರೀ ಸಿ.ಎಸ್. ರವರು ಯಥಾವತ್ತಾಗಿ ಕನ್ನಡಕ್ಕೆ ಭಾಷಾಂತರಿಸಿದ್ದನ್ನು ದಾಖಲಿಸಿಕೊಳ್ಳಲಾಗಿದೆ. )**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**